ಸರಬರಾಜು ಮಾಡುತ್ತಿವೆ?

ಆ) ಈ ಕಂಪನಿಗಳು ಮೊಳಕೆ ಬಾರದೆ ಇರುವ ಬೀಜಗಳನ್ನು ಸರಬರಾಜು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇರದಿದ್ದರೆ ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):

ಆ) ಮೆ: ಕಾರ್ಗಿಲ್ ಸಂಸ್ಥೆ ಮಾತ್ರ ನೇರವಾಗಿ ರಾಜ್ಯದಲ್ಲಿ ಬಿತ್ತನೆ ಬೀಜಗಳನ್ನು ಪೂರೈಸುವ ಏಕೈಕ ವಿದೇಶಿ ಸಂಸ್ಥೆಯಾಗಿದೆ.

ಆ) ಹೌದು.

ಇ) ಕೃಷಿ ಇಲಾಖೆಯು ರಾಜ್ಯದಲ್ಲಿ ಒಟ್ಟು 568 ಬೀಜ ಪರಿವೀಕ್ಷಕರುಗಳನ್ನು ನೇಮಕ ಮಾಡಿದ್ದು ಬಿತ್ತನೆ ಬೀಜಗಳನ್ನು, ಬಿತ್ತನೆ ಬೀಜಗಳ ಗುಣನಿಯಂತ್ರಣ ಮಾಡುವ ಸಲುವಾಗಿ ಬೀಜ ಪರಿವೀಕ್ಷಕರು, ವಿವಿಧ ಕಂಪನಿಗಳು ಉತ್ಪಾದಿಸಿ ಸರಬರಾಜು ಮಾಡಿರುವ ಬೀಜಗಳ ಮಾದರಿಯನ್ನು ತೆಗೆದು ರಾಜ್ಯ ಸರ್ಕಾರದ ಬೀಜ ಪ್ರಯೋಗಾಲಯಕ್ಕೆ ವಿಶ್ಲೇಷಣೆಗಾಗಿ ಕಳುಹಿಸಿಕೊಡುತ್ತಾರೆ. ವಿಶ್ಲೇಷಣೆಯಲ್ಲಿ ಕಳಪೆ ದರ್ಜೆ ಬಿತ್ತನೆ ಬೀಜ ಅಥವಾ ಕಡಿಮೆ ಮೊಳಕೆ ಬಂದಿರುವ ಬಿತ್ತನೆ ಬೀಜಗಳು ಕಂಡು ಬಂದರೆ ಸಂಬಂಧಪಟ್ಟ ಸಂಸ್ಥೆಯ ಮೇಲೆ ಮತ್ತು ಮಾರಾಟಗಾರರ ಮೇಲೆ ಬೀಜ ಅಧಿನಿಯಮ 1966 ಮತ್ತು ಬೀಜ (ನಿಯಂತ್ರಣ) ಆದೇಶ 1983 ಇವುಗಳ ಪ್ರಕಾರ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಅದರಂತೆ ಮೆ: ಕಾರ್ಗಿಲ್ ವಿದೇಶಿ ಕಂಪನಿಯು ಸರಬರಾಜು ಮಾಡಿದ ಸೂರ್ಯಕಾಂತಿ ಬಿತ್ತನೆ ಬೀಜವು ಕಳಪೆ ಮಟ್ಟದಾಗಿದ್ದು ಸದರಿ ಸಂಸ್ಥೆಯ ಮೇಲೆ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಹೂಡಲಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದ ಸಮೀಕ್ಷೆ.

548 (3744)

ಶ್ರೀ ಶಿವಾನಂದ ನಾಯ್ಕ (ಭಟ್ಕಳ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಸಮುದ್ರ ದಂಡೆಯಿಂದ ನಿರ್ಧಿಷ್ಟ ದೂರದಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ಸಮೀಕ್ಷೆ ನಡೆಸುತ್ತಿರುವುದು

ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಸಮೀಕ್ಷೆಯನ್ನು ಯಾವ ಉದ್ದೇಶಕ್ಕಾಗಿ ನಡೆಸಲಾಗುತ್ತಿದೆ?

ಆ) ಈ ಸಮೀಕ್ಷೆ ನಡೆಸುವುದರ ಮೂಲಕ ಸರ್ಕಾರ ಯಾವ ವಿಧದ ಕಾರ್ಯ ನಿರೂಪಣೆ ಅಪೇಕ್ಷಿಸುತ್ತದೆ?

ಇ) ಸಮೀಕ್ಷಾ ವಲಯವನ್ನು ಗುರುತಿಸಿದ ನಂತರ ಅಲ್ಲಿರುವವರನ್ನು ಒಕ್ಕಲೆಬ್ಬಿಸಲಾಗುವುದೇ ಅಥವಾ ಅಲ್ಲಿ ಬೃಹತ್ ಕಟ್ಟಡ, ಮನೆ ಕಟ್ಟಲು ಪರವಾನಗಿ ನೀಡುವುದನ್ನು ನಿರಾಕರಿಸಲಾಗುವುದೇ?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಹೌದು, ಕಂದಾಯ ಇಲಾಖೆಯ ಅಧಿಕಾರಿಗಳು ಸಮೀಕ್ಷೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಕರಾವಳಿ ಪ್ರದೇಶವನ್ನು ರಕ್ಷಿಸುವ ಉದ್ದೇಶದಿಂದ ಸಮೀಕ್ಷೆಯನ್ನು ನಡೆಸಲಾಗುತ್ತಿದೆ.

ಆ) ಕರಾವಳಿ ನಿಯಂತ್ರಣ ವಲಯದಲ್ಲಿ ಬರುವ ಪ್ರದೇಶವನ್ನು ರಕ್ಷಿಸುವ ದಿಶೆಯಿಂದ ಸದರಿ ಸಮೀಕ್ಷೆಯನ್ನು ಕೇಂದ್ರ ಸರ್ಕಾರದ ನಿರ್ದೇಶನ ಮೇರೆಗೆ ಜರುಗಿಸಲಾಗಿದೆ.

ಇ) ಕರಾವಳಿ ನಿಯಂತ್ರಣ ವಲಯ ಪ್ರದೇಶದಲ್ಲಿ ಅಧಿಕೃತವಾಗಿ ನೆಲಸಿದವರನ್ನು ಒಕ್ಕಲೆಬ್ಬಿಸುವ ಯಾವುದೇ ಕಾರ್ಯಕ್ರಮವಿರುವುದಿಲ್ಲ. ಆದರೆ ಕರಾವಳಿ ನಿಯಂತ್ರಣ ವಲಯದಲ್ಲಿ ಬರುವ ಕೆಲವು ನಿರ್ಬಂಧಿತ ಪ್ರದೇಶದಲ್ಲಿ ಕೆಲವೊಂದು ಸಂದರ್ಭ ಹೊರತು ಪಡಿಸಿ ಯಾವುದೇ ಚಟುವಟಿಕೆಗಳನ್ನು ಕೈಗೊಳ್ಳಲು ಅಥವಾ ನಿರ್ಮಾಣ ಕೈಗೊಳ್ಳಲು ಅವಕಾಶವಿರುವುದಿಲ್ಲ.

ದಿನಾಂಕ 6.11.1998ರ ಚುಕ್ಕಿಗುರುತಿಲ್ಲದ ಪ್ರಶ್ನೋತ್ತರಗಳು.

ಬಗರ್ ಹುಕಂ ಸಾಗುವಳಿ ಕುರಿತು.

2724: (3854)

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?